

ಮಳೆಕಾಡಿನಲ್ಲಿ ಹೀಗೊಂದು ಸೆಲ್ಫೀ

ಜಾಗದಿಂದ 8 ಕಿ.ಮೀ ದಕ್ಷಿಣಕ್ಕೆ ಹೊರಟರೆ ಮಾಲ್ಗುಡಿ ಟೌನ್ ಆಗುಂಬೆ ಸಿಗುತ್ತದೆ. ಅಲ್ಲಿಂದ ಒಂದು ಕಿಲೋಮೀಟರ್ ದೂರದಲ್ಲಿ ವಿಶ್ವ ವಿಖ್ಯಾತ ವ್ಯೂ ಪಾಯಿಂಟ್. ಕಾರ್ತಿಕ್ ಮತ್ತು ನನ್ನನ್ನು ಹೊರತು ಪಡಿಸಿ ಎಲ್ಲರಿಗೂ ಆಗುಂಬೆ ಮೊದಲ ಭೇಟಿಯಾದ್ದರಿಂದ ಇಲ್ಲಿ ಬರಲೇಬೇಕಾಯಿತು. ಬಿಡದೆ ಸುರಿಯುತಿದ್ದ ಮಳೆಯ ಕಾರಣ ಘಟ್ಟದ ಆ ಆಕಾಶದಲ್ಲಿ ಅಂದು ಸೂರ್ಯನಿರಲಿಲ್ಲ. ಇಳೆಯ ಒಡಲಿಗೆ ಪ್ರಭಾತನು ಸೇರುವ ಮನಮೋಹಕ ದೃಶ್ಯ ಕಾಣಲು ಕಟ್ಟಿರುವ ಛಾವಣಿಯ ಮೇಲೆ ನಿಂತರೆ, ಕಣ್ಣು ನೆಟ್ಟಷ್ಟು ದೂರಕ್ಕೂ ಮಂಜು. ಭೂಮಿಯ ತುದಿಯಲ್ಲಿರುವಂತೆ ಭಾಸವಾಗುತ್ತಿತ್ತು.

ಸಂಜೆ 6ಕ್ಕೆ ಹರ್ಪಿಂಗ್ ಸೆಷನ್‌ಗೆಂದು ಹೆಡ್ ಟಾರ್ಚ್, ಕ್ಯಾಮೆರಾಗಳನ್ನು ಹೊತ್ತು ತೋಟದೆಡೆಗೆ ಕಾಲಿಟ್ಟೆವು. ಇಲ್ಲಿಗೆ ಈ ಮುಂಚೆ ನಾನು ಬಂದಿದ್ದರಿಂದ ಎಲ್ಲಿ ಏನನ್ನು ಕಾಣಬಹುದೆಂಬ ಅರಿವಿತ್ತು, ಕಾಲ್ದಾರಿಯಲ್ಲಿ ಕಂಡ, ನನಗೆ ತಿಳಿದಿರುವ ಜೀವಚರಗಳ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಾ ಮುಂದೆ ಸಾಗಿದೆವು. ಸರಿಯಾಗಿ 8 ವಿವಿಧ ಬಗೆಯ ಕಪ್ಪೆಗಳನ್ನು ನೋಡಿ ಮುಂದೆ ಸಾಗುತ್ತ ಇದ್ದ ಹಾಗೆ, ಟರ್ರ್ ಟಕ್ಕ್ ಟಕ್ಕ್ ಟಕ್ಕ್ ಎಂದು **Yellow bush frog** ಗಳು ಕೂಗುತ್ತಿದ್ದುದನ್ನು ನೋಡಲು ಪೊದೆಗಳೆಡೆಗೆ ಟಾರ್ಚ್ ಬೆಳಕು ತೂರಿ ಬಿಟ್ಟೆವು, ಎಷ್ಟು ಪ್ರಯತ್ನಿಸಿದರೂ ನಮ್ಮ ದೃಷ್ಟಿಗೆ ಅದು ಸಿಗಲೇ ಇಲ್ಲ. ಇಷ್ಟಾಗುವಷ್ಟರಲ್ಲಿ ಗಡಿಯಾರದ ಸಣ್ಣ ಮುಳ್ಳು ಹತ್ತಿರತ್ತಿರ 1ಗಂಟೆ! ಹೊಟ್ಟೆ ಹಸಿವಿನ ಸಿಗ್ನಲ್. ಕಗ್ಗತ್ತಲಿನ ತೋಟದಿಂದ ಡೈನಿಂಗ್ ಹಾಲ್ ತಲುಪಿದ್ದೆವು.

## ಎರಡನೇ ದಿನ..

ಪ್ಲಾನ್ ಅನುಸಾರ ಕುಂದಾದ್ರಿ ಬೆಟ್ಟಕ್ಕೆ ಬೆಳಿಗ್ಗೆ 7ಕ್ಕೆ ಹೊರಟೆವು. ಬೆಟ್ಟದ ಮೇಲೆ ಜೈನ ದೇವಸ್ಥಾನವೊಂದಿದೆ. ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆಂದು ಎಂದೋ ಕೇಳಿದ್ದ ನೆನಪು. ಬೆಟ್ಟದ ಮೇಲೆ ನಿಂತು ನೋಡಿದರೆ ಮೋಡಗಳು ಕಾಲಡಿಯಲ್ಲಿವೆ ಎನಿಸುತ್ತದೆ. ಹೃನ್ಮನ ಸೆಳೆಯುವ ಆ ಮನೋಹರ ದೃಶ್ಯವನ್ನು ಕೆಲವರು ಕ್ಯಾಮೆರಾ ಕಣ್ಣಿನಿಂದ ಸೆರೆ ಹಿಡಿದರೆ, ಮಿಕ್ಕವರು ನಿಶ್ಯಬ್ದರಾಗಿ ಮೈ ಮರೆತು ಕೂತು ಆ ಸುಂದರ ಸಮಯವನ್ನು ಸವಿಯುತ್ತಿದ್ದರು. ತುಸು ಹೆಚ್ಚು ಸಮಯ ಅಲ್ಲಿ ಕಳೆಯಬೇಕೆನಿಸಿದರೂ ಉಳಿದ ಕಾರ್ಯಕ್ರಮಗಳನ್ನು ಪರಿಗಣಿಸಿ ಮರಳಿದೆವು. ದಾರಿಯುದ್ದಕ್ಕೂ ಮಲಬಾರ್ ವ್ಹಿಸ್ಲಿಂಗ್ ತ್ರಶ್‌ಗಳ ಕರೆಗಳು ಕರ್ಣಾನಂದಕರ.

ಕಾರ್ತಿಕ್ ಮತ್ತು ನಾನು ಒಂದೆಡೆ ಕುಳಿತು ಹಿಂದಿನ ದಿನ ತೆಗೆದ ಫೋಟೋಗಳನ್ನು ನೋಡುತ್ತಿರುವಾಗ, ಗಾಡಿಯತ್ತ ಬರುತ್ತಿದ್ದ ನಮ್ಮ ತಂಡದವರು ಹಾವೊಂದನ್ನು ಕಂಡರೆಂದು ನಮಗೆ ಅಲ್ಲಿಂದಲೇ ಕೈ ಸನ್ನೆಯಲ್ಲಿ ತಿಳಿಸಿದರು, ಉತ್ಸಾಹ ತಾಳಲಾರದೆ ಇಬ್ಬರು ಅವರಿದ್ದೆಡೆಗೆ ಓಡಿದೆವು. ಮುರಿದು ಬಿದ್ದಿದ್ದ ಗಿಡದ ಮೇಲೆ ಮರಿ ಹಸಿರು ಹಾವು (**Green Vine snake**) ಆ ಗಿಡದ ಭಾಗವೇನೋ ಎಂಬಂತೆ ಬಳ್ಳಿಯ ಹಾಗೆ ಗಾಳಿಯಲ್ಲಿ ಮೆಲ್ಲಗೆ ತೂಗುತ್ತಾ ಮುಂದೆ ಸರಿಯುತ್ತಿತ್ತು, ನಾಲಗೆ ಹೊರ ಚಾಚುತ್ತಾ ತನ್ನ ಆಹಾರ ಹುಡುಕುತ್ತಿದ್ದ ಛದ್ಮವೇಶದ ಹಸಿರು ಹಾವು, ಸಣ್ಣ ಕಪ್ಪೆಯೊಂದನ್ನು ಗುಳುಂ ಮಾಡಿ ಬಿಟ್ಟಿತು. ಆ ಕ್ಷಣಕ್ಕೆ ಸಾಕ್ಷಿಯಾದ ಸಂತಸದಲ್ಲಿ, ಸದ್ದು ಮಾಡದೆ ಅಲ್ಲಿಂದ ಗಾಡಿಯತ್ತ ಹೊರಟೆವು.

ಒನಕೆ ಅಬ್ಬಿಯತ್ತ ತಂಡ ತೆರಳಿತು. ಜಲಪಾತದ ಜಾಡು ಜಿಗಣೆಗಳ ಆವಾಸ ಸ್ಥಾನವಾದ್ದರಿಂದ ಹೊರಡುವ ಮುನ್ನವೇ ರಕ್ಷಣಾ ಸಾಕ್ಸ್ ಗಳನ್ನು ಧರಿಸುವುದು ಒಳ್ಳೆಯದೆಂದು ಸೂಚಿಸಲಾಗಿತ್ತು. ಕಿರಿದಾದ ಚಾರಣದ ಹಾದಿಯಾದ್ದರಿಂದ ಒಂದೇ ಸಾಲಿನಲ್ಲಿ ಚಲಿಸಬೇಕಿತ್ತು. ತಂಡದ ಮುಂದುಗಡೆ ನಾನು ಮತ್ತು ಕೊನೆಯಲ್ಲಿ ಕಾರ್ತಿಕ್. ಮರನಿಬಿಡ ನಿತ್ಯ ಹರಿದ್ವರ್ಣ ಕಾಡಿನಲ್ಲಿ ಸಣ್ಣ ಇರುವೆಗಳಂತೆ ಪಂಕ್ತಿಯಲ್ಲಿ ಸಾಗಿದೆವು. ಇಡೀ ಗುಂಪಿನಲ್ಲಿ ಮೂವರನ್ನು ಹೊರತು ಪಡಿಸಿ ಮತ್ತೆಲ್ಲರೂ ಜಿಗಣೆಯನ್ನು ಪ್ರತ್ಯಕ್ಷ ನೋಡುತ್ತಿದ್ದುದು ಇದೇ

